**ಕವಿತೆ**

# ಗಾಂಧೀಜಿ ಮತ್ತು ಕಾವ್ಯ

ಮಲಯಾಳಂ: **ಕೆ. ಸಚ್ಚಿದಾನಂದನ್**
ಕನ್ನಡಕ್ಕೆ: **ತೇರ್ ಳಿ ಎನ್. ಶೇಖರ್**


ಕಲೆ: ಎಸ್.ವಿ. ಹೂಗಾರ್

ಅದೊಂದುದಿನ ಒಂದು ಬಡಕಲು ಕಾವ್ಯ
ಗಾಂಧೀಜಿಯವರನ್ನು ಭೇಟಿಯಾಗಲೆಂದು
ಆಶ್ರಮಕ್ಕೆ ದಯಮಾಡಿಸಿತು.
ಆ ಹೊತ್ತಿನಲ್ಲಿ ಗಾಂಧೀಜಿಯವರು ಮೈಬಗ್ಗಿಸಿ ಕುಳಿತು
ರಾಮನೆಡೆಗಿರುವ ನೂಲನ್ನು ನೂಲುತ್ತಿದ್ದರು.

ತಾನೊಂದು ಭಜನೆಯಾಗದಿದ್ದುದಕ್ಕಾಗಿ ನಾಚಿ
ಬಾಗಿಲಲ್ಲೇ ನಿಂತುಬಿಟ್ಟಿದ್ದ ಕಾವ್ಯವನ್ನು
ಗಾಂಧೀಜಿ ಮೊದಲು ಗಮನಿಸಿರಲಿಲ್ಲ.
ಕಾವ್ಯ ಗಂಟಲು ಸರಿಪಡಿಸಿಕೊಳ್ಳುವಾಗ ಗಾಂಧೀಜಿ
ನರಕವನ್ನಷ್ಟೇ ಕಂಡಿದ್ದ ತಮ್ಮ ಕನ್ನಡಕದಿಂದ
ಕಡೆಗಣ್ಣಿಟ್ಟು ದಿಟ್ಟಿಸುತ್ತಾ ಪ್ರಶ್ನಿಸಿದರು :

'ನೀನು ಎಂದಾದರೂ ನೂಲು ನೂತಿರುವೆಯಾ?
ಜಾಡಮಾಲಿಯ ತಳ್ಳುಬಂಡಿ ಎಳೆದಿರುವೆಯಾ?
ನಸುಕಿನಲ್ಲೆದ್ದು ಅಡುಗೆಮನೆಯ
ಹೊಗೆಗೆ ಮೈಯೊಡ್ಡಿರುವೆಯಾ?
ಎಂದಾದರೂ ಉಪವಾಸ ಮಲಗಿರುವೆಯಾ?'

ಕಾವ್ಯ ನುಡಿಯಿತು :
ಹುಟ್ಟಿದ್ದು ನಾನು ಕಾನನದಲ್ಲಿ
'ಬೇಡರನೊಬ್ಬನ' ಬಾಯಲ್ಲಿ;
ಬೆಳೆದಿದ್ದು 'ಬೆಸ್ತರಗಿತ್ತಿ'ಯ ಗುಡಿಸಿಲಿನಲ್ಲಿ.
ನನಗೆ ಹಾಡಲ್ಲದೆ ಬೇರೆ ಕಾಯಕ ಗೊತ್ತಿಲ್ಲ.
ಬಹಳಷ್ಟು ಕಾಲ ಹಾಡು ಹಾಡುತ್ತ
ಅರಮನೆಗಳಲ್ಲಿ ಕಳೆದೆ.
ಅಂದು ನಾನು ಬೆಳ್ಳಗಿದ್ದೆ ಕೊಬ್ಬಿದ್ದೆ.
ಈಗ ಅರೆಹೊಟ್ಟೆಯಲ್ಲಿ ಬೀದಿ ಪಾಲಾಗಿರುವೆ.'

ಗಾಂಧೀಜಿ ಮುಗುಳ್ನಗುತ್ತ ಹೇಳಿದರು:
'ಇದೀಗ ನೀನು ಕೊನೆಯಲ್ಲಿ ಹೇಳಿದ
ಸಂಗತಿಯಷ್ಟೇ ಸತ್ಯವಾದುದು;
ಆದರೆ,
ಸಂಸ್ಕೃತ ಮಾತನಾಡುವ ಅಭ್ಯಾಸವನ್ನು
ಸಂಪೂರ್ಣವಾಗಿ ಬಿಟ್ಟುಬಿಡಬೇಕು.
ಗದ್ದೆಗೆ ಹೋಗು, ಅಲ್ಲಿ
ರೈತರಾಡುವ ಮಾತುಗಳನು ಆಲಿಸು.'

ಕಾವ್ಯ–
ಒಂದು ಬಿತ್ತನೆಯ ಕಾಳಾಗಿ ರೂಪಾಂತರಗೊಂಡು
ಗದ್ದೆಗೆ ತೆರಳಿತು.
ಮುಂಗಾರು ಮಳೆಬಿದ್ದ ನೆಲದಲ್ಲಿ
ಉತ್ತು ದಬ್ಬುಹಾಕಲು
ರೈತರಾಗಮಿಸುವ ದಿನಕ್ಕಾಗಿ ಕಾಯತೊಡಗಿತು.